## ಕೆರೆ ತುಂಬುವ ಯೋಜನೆ

**ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ):–**

364(161) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳ ಕೆರೆ ತುಂಬುವ ಯೋಜನೆ ಯಾವ ಹಂತದಲ್ಲಿದೆ;

(ಆ) ಬಸವನ ಬಾಗೇವಾಡಿ ತಾಲ್ಲೂಕಿನ 32 ಕೆರೆಗಳು ಮತ್ತು ಬಿಜಾಪುರ ತಾಲ್ಲೂಕಿನ 23 ಕೆರೆಗಳನ್ನು ತುಂಬುವ ಯೋಜನೆ ಯಾವ ಹಂತದಲ್ಲಿರುತ್ತದೆ ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು;

(ಇ) ಬಿಜಾಪುರ ಜಿಲ್ಲೆಯ ಮುಳವಾಡ, ಚಿಮ್ಮಲಗಿ, ಗುತ್ತಿ ಬಸವಣ್ಣ ಮುಂತಾದ ಏತ ನೀರಾವರಿ ಯೋಜನೆಗಳು ಯಾವ ಹಂತದಲ್ಲಿವೆ ಹಾಗೂ ಈ ಯೋಜನೆಗಳಿಗೆ ತಗಲುವ ವೆಚ್ಚವೆಷ್ಟು?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–**

(ಅ) ಬಿಜಾಪುರ ಜಿಲ್ಲೆಯ 16 ಕೆರೆಗಳು ಹಾಗೂ 5 ಬಾಂದಾರುಗಳು ಮತ್ತು ಬಾಗಲಕೋಟೆ ಜಿಲ್ಲೆಯ 7 ಕೆರೆಗಳಿಗೆ ಎರಡು ಹಂತಗಳಲ್ಲಿ ನೀರನ್ನು ಎತ್ತಿ ತುಂಬಿಸುವ ಯೋಜನೆ ಆಗಿರುತ್ತದೆ. ಅದರಲ್ಲಿ ಒಂದನೇ ಹಂತದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಎರಡನೇ ಹಂತದ ಕಾಮಗಾರಿಯು ಪ್ರಗತಿಯಲ್ಲಿದೆ.

(ಆ) ಸಣ್ಣ ನೀರಾವರಿ ಇಲಾಖೆಯ ಆದೇಶ ಸಂ. ಸನೀಇ 07 ಕೆಜಿದು 2010 ದಿನಾಂಕ: 12–04–2010 ರಲ್ಲಿ ಕೆರೆಗಳಿಗೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಬಿಜಾಪೂರ ಜಿಲ್ಲೆಯ 27 ಸಣ್ಣ ನೀರಾವರಿ ಕೆರೆಗಳಲ್ಲಿ ನೀರು ತುಂಬಿಸುವ ಯೋಜನೆಯನ್ನು ಕೈಗೊಳ್ಳುವ ಸಲುವಾಗಿ ಜಲಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ಈ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪ್ರಸ್ತಾವನೆಯ ಸಾಧ್ಯ ಸಾಧ್ಯತೆಗಳ ಬಗ್ಗೆ ನಿಗಮದಡಿ ಪರಿಶೀಲಿಸಲಾಗುತ್ತಿದೆ.

ಈ ಯೋಜನೆಗೆ ರೂ. 175.00 ಕೋಟಿಗಳ ಅಂದಾಜು ರೇಖಾ ಪತ್ರಿಕೆಯನ್ನು ತಯಾರಿಸಲಾಗಿದೆ.

ಕೃಷ್ಣಾ ನ್ಯಾಯಾಧೀಕರಣದ ದಿನಾಂಕ: 30–12–2010 ರ ಐತೀರ್ಪಿನಂತೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 3ರಡಿ 130.90 ಟಿಎಂಸಿ ನೀರನ್ನು ಬಳಸಬಹುದಾಗಿದ್ದು, ಈ ಕೆಳಕಂಡ ಯೋಜನಾ ಕಾಮಗಾರಿಗಳನ್ನು ಪೂರ್ವಭಾವಿಯಾಗಿ ಕೈಗೆತ್ತಿಕೊಳ್ಳಲಾಗಿದೆ.

1. ಮುಳವಾಡ ಏತ ನೀರಾವರಿ ಯೋಜನೆ ಹಂತ–3 ರಲ್ಲಿಯ 2.27 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರ ಟೋಪೋಗ್ರಾಫಿಕಲ್ ಸರ್ವೆ ಪೂರ್ಣಗೊಂಡಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತ ರೂ. 4957.66 ಕೋಟಿಗಳು.

2. ಚಿಮ್ಮಲಗಿ ಏತ ನೀರಾವರಿ ಯೋಜನೆ ಅಡಿಯಲ್ಲಿ ಟರ್ನ್‌ಕೀ ಆಧಾರದ ಮುಖ್ಯ ಸ್ಥಾವರದ ಕಾಮಗಾರಿ ಮತ್ತು 2.10 ಕಿ.ಮೀ. ಕಂಬೈನ್ಸ್ ಕಾಲುವೆ ಹಾಗೂ 20 ಕಿ.ಮೀ. ಪಶ್ಚಿಮ ಕಾಲುವೆ (ವಿತರಣಾ ಕಾಲುವೆ ಒಳಗೊಂಡಂತೆ) ಕಾಮಗಾರಿಗಳು ಕೈಗೆತ್ತಿಕೊಂಡಿದ್ದು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯ ಅಂದಾಜು ಮೊತ್ತ ರೂ. 2428.96 ಕೋಟಿಗಳು.

3. ಇಂಡಿ ಏತ ನೀರಾವರಿ (ಗುತ್ತಿ ಬಸವಣ್ಣ) ಕಿ.ಮೀ. 97.30 ರಿಂದ 128 ರವರೆಗಿನ ಕಾಮಗಾರಿಗಳನ್ನು (ವಿತರಣಾ ಕಾಲುವೆ ಒಳಗೊಂಡಂತೆ) ಈಗಾಗಲೇ ಕೈಗೆತ್ತಿಕೊಂಡಿದ್ದು ಪ್ರಗತಿಯು ವಿವಿಧ ಹಂತದಲ್ಲಿದೆ. ಈ ಯೋಜನೆಯ ಅಂದಾಜು ಮೊತ್ತ ರೂ. 360.84 ಕೋಟಿಗಳು.

## ದಿನಗೂಲಿ ನೌಕರರು

**365 (726) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :–** ಮಾನ್ಯ ಅರಣ್ಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಜಾಪುರ ಜಿಲ್ಲೆಯ ಆಲಮಟ್ಟಿ ಮತ್ತು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅರಣ್ಯ ಇಲಾಖೆಗಳಲ್ಲಿ ದಿನಗೂಲಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು?

ಆ) ಸದರಿಯವರ ಸೇವೆಯನ್ನು ಖಾಯಂಗೊಳಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು) :–**

ಅ) ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಅರಣ್ಯ ಇಲಾಖೆಯ ದಿನಗೂಲಿ ನೌಕರರು ಯಾರು ಇರುವುದಿಲ್ಲ. ರಾಜ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ಕಾರ್ಯ